# ಕಣ್ಮನ ಸೆಳೆಯುವ ಸೂರ್ಯಕಾಂತಿ



ಬಯಲು ಸೀಮೆ ವಾತಾವರಣ ಸೂರ್ಯಕಾಂತಿ ಬೆಳೆಯಲು ಸೂಕ್ತವಾದರಿಂದ ಅಲ್ಲಿನ ಕೃಷಿಕರು ಹೆಚ್ಚಾಗಿ ಸೂರ್ಯಕಾಂತಿಯನ್ನೆ ಬೆಳೆಯುತ್ತಾರೆ. ಮಲೆನಾಡು, ಉತ್ತರ ಕನ್ನಡ ಜಿಲ್ಲೆಯಲ್ಲಿ ಈ ಬೆಳೆ ಸಾಮಾನ್ಯವಾಗಿ ಕಂಡುಬರುತ್ತಿರಲಿಲ್ಲ. ಆದರೆ ಇತ್ತೀಚೆಗೆ ಸೂರ್ಯಕಾಂತಿಯನ್ನು ಉತ್ತರಕನ್ನಡದ ಜನತೆಯು ಬೆಳೆಯಲು ಪ್ರಾರಂಭ ಮಾಡಿದ್ದಾರೆ. ಯಲ್ಲಾಪುರ ತಾಲ್ಲೂಕಿನ ಚವತ್ತಿ ಸನಿಹದ ಅಂಬ್ಲಿಹೊಂಡ ಗದ್ದೆಯಲ್ಲಿ ಕಂಗೊಳಿಸುವ ಸೂರ್ಯಕಾಂತಿಯೇ ಇದಕ್ಕೆ ಸಾಕ್ಷಿ.

ಅಂಬ್ಲಿಹೊಂಡದ ಪ್ರಗತಿಪರ ಕೃಷಿಕ ವೆಂಕಟ್ರಮಣ ಹೆಗಡೆ ತಮ್ಮ ಗದ್ದೆಯನ್ನು ಬೇಸಿಗೆಯ ದಿನದಲಿ ಖಾಲಿ ಬಿಡುವುದೇ ಇಲ್ಲ. ಪ್ರತಿ ವರ್ಷವೂ ಅವರು ದ್ವಿದಳ ಧಾನ್ಯ, ಸೊಂಪು ಇತ್ಯಾದಿ ಬೆಳೆಯನ್ನು ಬೆಳೆಯುತ್ತಲೆ ಬಂದಿದ್ದಾರೆ. ಮೊದಲ ಬಾರಿಗೆ ಸೂರ್ಯಕಾಂತಿ ಬೆಳೆದು ಅದೃಷ್ಟ ಪರೀಕ್ಷಿಸಲು ಮುಂದಾದ್ದರು.

ಬಹಳ ಆಸಕ್ತಿ, ಪರಿಶ್ರಮದಿಂದ ಸೂರ್ಯಕಾಂತಿಯನ್ನು ನಾಟಿ ಮಾಡಿದ ಅವರು ಅದನ್ನು ಉತ್ತಮವಾಗಿ ಸಂರಕ್ಷಿಸಿ, ಪೋಷಿಸಲು ಯಶಸ್ವಿಯಾಗಿದ್ದಾರೆ. ಆಳೆತ್ತರಕ್ಕೆ ಬಲಿತು ನಿಂತಿರುವ ಈ ಗಿಡದಲ್ಲಿಗ ಆಕರ್ಷಕ ಹೂಗಳು ಅರಳಿ ನಿಂತಿದೆ. ಶಿರಸಿ–ಯಲ್ಲಾಪುರ ಹೆದ್ದಾರಿಯ ಪಕ್ಕದಲ್ಲಿಯೇ ಸೂರ್ಯಕಾಂತಿಯ ಹೂಗಳು ಕಂಗೊಳಿಸುತ್ತಿದ್ದು, ದಾರಿಹೋಕರನ್ನು ಆಕರ್ಷಿಸುತ್ತಿದೆ.

**ಚಿತ್ರ-ಬರಹ: ಗಣಪತಿ ಹಾಸ್ಪುರ**

